# ಆಹಾ ಸುದ್ದಿ!

★ ಸಸಿತೋಟ



ಚೀನಾದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ವ್ಯಕ್ತಿಯೊಬ್ಬ ಹಾವುಗಳನ್ನೇ ಸೂತ್ರನೇತಿಯಂತೆ ಬಳಸಿ ಬೆರಗುಗೊಳಿಸಿದ. ಭಾರತ ಹಾವುಗಳನ್ನು ಆಡಿಸುವವರ ದೇಶ ಎನ್ನುವ ಪಾಶ್ಚಾತ್ಯರು ಇದನ್ನು ನೋಡಿ ಏನನ್ನುತ್ತಾರೋ?

ಕ್ಯಾಲಿಫೋರ್ನಿಯಾದಲ್ಲಿ ಎರಿಕ್ ಎಂಬಾತ ತನ್ನ ಪ್ರಿಯತಮೆಗೆ ಬಹಳ ರೋಮ್ಯಾಂಟಿಕ್ ಆಗಿ ಮದುವೆ ಪ್ರಸ್ತಾವ ಇಡಬೇಕೆಂದು ಯೋಜಿಸಿದ್ದ. ಬಿಸಿ ಬಲೂನಿನಲ್ಲಿ ಇಬ್ಬರೂ ಸಮುದ್ರದ ಮೇಲೆ ಹಾರುತ್ತಿದ್ದಾಗ ಆತ ಪ್ರಸ್ತಾವ ಮುಂದಿಟ್ಟಿದ್ದನಷ್ಟೆ. ಬಲವಾಗಿ ಬೀಸಿದ ಗಾಳಿ ಇಬ್ಬರನ್ನೂ ಕಡಲಿಗೆ ದಬ್ಬಿತು. ಬಲೂನಿನ ಪೈಲಟ್ ಹೇಗೋ ಇಬ್ಬರನ್ನೂ ರಕ್ಷಿಸಿದನಂತೆ. ಆದರೆ ಎರಿಕ್‌ನ ಪ್ರಶ್ನೆಗೆ ನಲ್ಲೆ ಉತ್ತರಿಸದೆ ಆತನಿಗೆ ಕಿರಿಕ್ ಆಗಿದ್ದು ಬಲೂನಿಗೆ ಸೂಜಿ ಚುಚ್ಚಿದಂತಾಗಿದೆಯಂತೆ.



'ಅವಳ ಶೂನಲ್ಲಿ ಒಂದು ಮೈಲಿ ನಡೆಯಿರಿ' ಎಂಬ ಕಾರ್ಯಕ್ರಮ ಇತ್ತೀಚೆಗೆ ಅಮೆರಿಕಾದ ಸ್ಯಾಂಡಿಯಾಗೋದಲ್ಲಿ ನಡೆಯಿತು. ಮಹಿಳೆಯರ ಮೇಲೆ ನಡೆಯುವ ಕೌಟುಂಬಿಕ ದೌರ್ಜನ್ಯದ ಕುರಿತು ಅರಿವು ಮೂಡಿಸಲು ಪುರುಷರು ಮಹಿಳೆಯರ ಶೂಗಳನ್ನು ಧರಿಸಿ ಅಸಡಾಬಸಡಾ ಹೆಜ್ಜೆ ಹಾಕುತ್ತ ನಡೆದರು. ಮಹಿಳೆಯರ ಮೇಲೆ ಹಿಂಸೆ ನಡೆಯುವುದು ಈ ಶೂಗಳ ಮೂಲಕ ಎಂಬುದು ಕಾರ್ಯಕ್ರಮದ ಆಯೋಜಕರಿಗೆ ಅಷ್ಟೊಂದು ಖಾತ್ರಿ ಆಗಿತ್ತೇ?

ಕೊಲಂಬಿಯಾದಲ್ಲಿ ನಡೆದ ಹಚ್ಚೆ ಪ್ರದರ್ಶನದಲ್ಲಿ ಮ್ಯಾಟ್ ಎಂಬಾತ ತನ್ನ ದೇಹ ಪ್ರದರ್ಶಿಸಿದ. ಒಂದಿಂಚೂ ತಾವಿಲ್ಲದಂತೆ ಹಚ್ಚೆ ಹಾಕಿಸಿಕೊಂಡ ಈತ ದಾಖಲೆಗಳಲ್ಲಿ ದೇಹದ ಬಣ್ಣ ಯಾವುದೆಂದು ಭರ್ತಿ ಮಾಡುತ್ತಾನೋ?



ರಷ್ಯಾದ ಅಧ್ಯಕ್ಷ ಪುಟಿನ್ ಬಂಧನದಲ್ಲಿದ್ದ ಅಪರೂಪದ ಹುಲಿಯೊಂದನ್ನು ಕಾಡಿಗೆ ಬಿಟ್ಟಿದ್ದಾರಂತೆ. ಆದರೆ ಅದು ತಿರುಗಾಡುತ್ತ ಚೀನಾದ ಅರಣ್ಯಕ್ಕೆ ಬಂದಿದೆಯಂತೆ. ಈಗ ಚೀನಾ ಅದನ್ನು ಹಿಡಿಯಲು ದೊಡ್ಡ ತಂತ್ರವನ್ನೇ ಹೆಣೆದಿದ್ದು, ಚೀನಾದ ಸಾಂಪ್ರದಾಯಕ ಔಷಧಗಳಿಗೆ ಬಲಿಯಾಗುವ ಬೆದರಿಕೆ ತಲೆದೋರಿದೆಯಂತೆ. ಈಗ ರಷ್ಯಾ ಮತ್ತು ಚೀನಾದ ರಾಜತಾಂತ್ರಿಕ ಸಂಬಂಧದ ಮಧ್ಯೆ ಹುಲಿಯೇ ಅಡ್ಡ ನಿಂತಂತಾಗಿದೆ.



ಜರ್ಮನಿಯ ಬೆಟ್ಟಗಳಲ್ಲಿ ಹಸುಗಳು ಸೆಗಣಿ ಹಾಕಬಾರದು ಎಂಬ ನಿಷೇಧ ಹೇರಿದ್ದಾರಂತೆ. ಅದಕ್ಕೇ ಈ ರೈತ ತನ್ನ ಹಸುವಿಗೆ ಡಯಾಪರ್ ಹಾಕಿದ್ದಾನೆ. ಸೂಪರ್ ಮಾರುಕಟ್ಟೆಯಲ್ಲಿ ಅಷ್ಟು ದೊಡ್ಡ ಡಯಾಪರ್ ಮಾರಾಟ ಮಾಡುವುದಿಲ್ಲ ಎಂದು ಹೇಳಿದ್ದರಿಂದ ಈ ರೈತ ತಾನೇ ಕೂತು ಪ್ಲಾಸ್ಟಿಕ್‌ನಿಂದ ಡಯಾಪರ್ ತಯಾರಿಸಿದ್ದಾನಂತೆ. ಜರ್ಮನಿಯಲ್ಲಿ ವಹಿವಾಟು ಹೆಚ್ಚಿಸಿಕೊಳ್ಳುವ ಕಂಪೆನಿಗಳಿಗೆ ಒಳ್ಳೆಯ ವ್ಯಾಪಾರಿ ಐಡಿಯಾ!